ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್):-

1044(1260) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಬೆಂಗಳೂರು ನಗರದ ಕೆಲವು ಖಾಸಗಿ ಶಾಲೆಗಳು ಮಕ್ಕಳ ಸಮವಸ್ತ್ರ ಮತ್ತು ಪುಸ್ತಕಗಳನ್ನು ದುಬಾರಿ ಬೆಲೆಯಲ್ಲಿ ಶಾಲೆಯಲ್ಲಿಯೇ ಕೊಂಡುಕೊಳ್ಳುವಂತೆ ಪೋಷಕರನ್ನು ಒತ್ತಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ನಿಯಮಗಳಲ್ಲಿ ಇದಕ್ಕೆ ಅವಕಾಶವಿದೆಯೇ;

(ಇ) ಒಂದು ವೇಳೆ ಇಲ್ಲದೇ ಇದ್ದಲ್ಲಿ ಸರ್ಕಾರವು ಒಂದು ಸುತ್ತೋಲೆಯನ್ನು ಹೊರಡಿಸಿ ಖಾಸಗಿ ಶಾಲೆಗಳಿಂದ ಪೋಷಕರಿಗೆ ಆಗುತ್ತಿರುವ ಸುಲಿಗೆಯನ್ನು ತಪ್ಪಿಸಲು ಯಾವ ಕ್ರಮ ಕೈಗೊಳ್ಳಲಾಗುವುದು.

(ಈ) ಒಂದು ವೇಳೆ ಶಾಲೆಗಳು ಇದನ್ನು ಪಾಲಿಸದೇ ಇದ್ದಲ್ಲಿ ಇಂತಹ ಶಾಲೆಗಳ ಮಾನ್ಯತೆಯನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದೇ?

(ಉ) ಹಾಗಿದ್ದಲ್ಲಿ, ಯಾವ ಯಾವ ಜಿಲ್ಲಾಧಿಕಾರಿಗಳು ಈ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ;

ಶ್ರೀ ಬಸವರಾಜ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

(ಅ) ಈ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ.

(ಆ) ಶಿಕ್ಷಣ ಕಾಯ್ದೆಯ ಪ್ರಕಾರ ಯಾವುದೇ ಅವಕಾಶ ಇರುವುದಿಲ್ಲ.

(ಇ) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ ಸಿ7(1) ಪ್ರಾಶಿಅ-ಇತರೆ-13/2007-08, ದಿ:20.7.2007ನ್ನು ಹೊರಡಿಸಲಾಗಿದೆ.

(ಈ) ಇಲಾಖೆಯು ಹೊರಡಿಸುವ ಸುತ್ತೋಲೆ/ಆದೇಶಗಳನ್ನು ಖಾಸಗಿ ಶಾಲೆಗಳು ಪಾಲಿಸದೇ ಇದ್ದಲ್ಲಿ, ಶಿಕ್ಷಣ ಕಾಯ್ದೆಯ ನಿಯಮದಂತೆ ಶಾಲೆಗಳ ವಿರುದ್ಧ ಕ್ರಮ ಕೈಗೊಳ್ಳಲು ಅವಕಾಶವಿರುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್):-

1045(1487) ಮಾನ್ಯ ಜಲಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಕೃಷ್ಣಾ ಭಾಗ್ಯ ಜಲ ನಿಗಮದ ವತಿಯಿಂದ ಆಲಮಟ್ಟಿ ಅಣೆಕಟ್ಟಿನ ಸ್ಥಳದಲ್ಲಿ ಬೃಹತ್ ಮತ್ತು ಸುಂದರವಾದ ಉದ್ಯಾನವನವನ್ನು ನಿರ್ಮಿಸಿರುವುದು ನಿಜವಲ್ಲವೇ, ಎಷ್ಟು ಎಕರೆಯಲ್ಲಿ ಈ ಉದ್ಯಾನವನವನ್ನು ನಿರ್ಮಿಸಲಾಗಿದೆ, ಇದಕ್ಕೆ ತಗುಲಿದ ವೆಚ್ಚವೆಷ್ಟು;

(ಆ) ಇದಕ್ಕಾಗಿ ಅರಣ್ಯ ಇಲಾಖೆಗೆ ಎಷ್ಟು ಹಣವನ್ನು ಇಲ್ಲಿಯವರೆಗೆ ನೀಡಲಾಗಿದೆ, ಈ ಸಮಯದಲ್ಲಿ ಕಾರ್ಯನಿರ್ವಹಿಸಿದ ಅರಣ್ಯ ಇಲಾಖೆಯ ಅಧಿಕಾರಿಗಳು ಯಾರು; (ಹುದ್ದೆವಾರು ವಿವರಗಳನ್ನು ಒದಗಿಸುವುದು)

(ಇ) ಇದೇ ಸ್ಥಳದಲ್ಲಿ ಕೆ.ಆರ್.ಎಸ್. ಅಣೆಕಟ್ಟಿನ ಸುತ್ತ ಸೈಟಿನಲ್ಲಿ ನಿರ್ಮಿಸಲಾಗಿರುವ ಬೃಂದಾವನ ಉದ್ಯಾನವನದ ಮಾದರಿಯಲ್ಲಿ ಸಂಗೀತ ಕಾರಂಜಿ ಮತ್ತು ಬೃಹತ್ ಉದ್ಯಾನವನವನ್ನು ನಿರ್ಮಿಸುತ್ತಿರುವುದು ನಿಜವೇ, ಇದರ ಯೋಜನಾ ವೆಚ್ಚವೆಷ್ಟು;

(ಈ) ಹಾಗಿದ್ದಲ್ಲಿ, ಈ ಕಾಮಗಾರಿಯು ಯಾವಾಗ ಪ್ರಾರಂಭವಾಗಿದೆ, ಯಾವಾಗ ಮುಕ್ತಾಯಗೊಂಡು ಸಾರ್ವಜನಿಕ ವೀಕ್ಷಣೆಗೆ ತೆರೆಯಲಾಗುವುದು, ಇದಕ್ಕಾಗಿ ಅರಣ್ಯ ಇಲಾಖೆಗೆ ನೀಡಿರುವ ಹಣವೆಷ್ಟು;

(ಉ) ಪ್ರಸಕ್ತ ಆಯವ್ಯಯದ ವರ್ಷದಲ್ಲಿ ಇಲ್ಲಿಯವರೆಗೆ ಇದಕ್ಕಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ, ಇದರ ಉಸ್ತುವಾರಿಗಾಗಿ ಕಾರ್ಯನಿರ್ವಹಿಸುತ್ತಿರುವ ಅರಣ್ಯಾಧಿಕಾರಿಗಳ ಹೆಸರು ವಿವರಗಳೇನು;

(ಊ) ಈ ಉದ್ಯಾನವನವು ಸುಂದರವಾಗಿ ಮೂಡಿಬರುತ್ತಿದ್ದು ಅಗತ್ಯವಿರುವ ಹಣವನ್ನು ನೀಡಿ ಸಮಯಕ್ಕೆ ಸರಿಯಾಗಿ ಈ ಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಕೆ.ಎಸ್.ಈಶ್ವರಪ್ಪ (ಜಲಸಂಪನ್ಮೂಲ ಸಚಿವರು):-

(ಅ) ಕೃಷ್ಣಾ ಭಾಗ್ಯ ಜಲ ನಿಗಮದ ವತಿಯಿಂದ ಆಲಮಟ್ಟಿ ಆಣೆಕಟ್ಟಿನ ಸ್ಥಳದಲ್ಲಿ ಬೃಹತ್ ಮತ್ತು ಸುಂದರವಾದ ಉದ್ಯಾನವನವನ್ನು ನಿರ್ಮಿಸುತ್ತಿರುವುದು ನಿಜ.

ಸದರಿ ಉದ್ಯಾನವನವನ್ನು ಸಧ್ಯಕ್ಕೆ ಒಟ್ಟು 126 ಎಕರೆಯಲ್ಲಿ ನಿರ್ಮಿಸಲಾಗುತ್ತಿದೆ. ಇಲ್ಲಿಯವರೆಗೆ ತಗುಲಿದ ವೆಚ್ಚ ರೂ.2506.02 ಲಕ್ಷಗಳು.

(ಆ) ಸದರಿ ಉದ್ಯಾನವನವನ್ನು ಕೃಷ್ಣಾ ಭಾಗ್ಯ ಜಲ ನಿಗಮದ ವತಿಯಿಂದ ನಿರ್ಮಿಸಲಾಗುತ್ತಿದ್ದು, ಅರಣ್ಯ ಇಲಾಖೆಗೆ ಯಾವುದೇ ಹಣವನ್ನು ನೀಡಿರುವುದಿಲ್ಲ.

ಆಲಮಟ್ಟಿ ಮತ್ತು ನಾರಾಯಣಪೂರ ಜಲಾಶಯಗಳ ಕ್ಯಾಚ್‌ಮೆಂಟ್ ಏರಿಯಾ

ಟ್ರೀಟ್‌ಮೆಂಟ್‌ಗಾಗಿ ಅರಣ್ಯ ಇಲಾಖೆಯ ಒಂದು ವಿಭಾಗದ ಸೇವೆಯನ್ನು ಎರವಲು ಪಡೆದಿದ್ದು, ಸದರಿ ವಿಭಾಗವು ಜಲಾನಯನ ಅಭಿವೃದ್ಧಿ, ಅರಣ್ಯೀಕರಣ ಕಾಮಗಾರಿಗಳೊಂದಿಗೆ ಉದ್ಯಾನವನದ ಸಾಫ್ಟ್ ಲ್ಯಾಂಡ್‌ಸ್ಕೇಪ್ ಕಾಮಗಾರಿಗಳನ್ನು ಕೂಡ ನಿರ್ವಹಿಸುತ್ತಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಅರಣ್ಯ ಇಲಾಖೆಯಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸಿದ ಅಧಿಕಾರಿಗಳ ಹುದ್ದೆವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

(ಇ) ಆಲಮಟ್ಟಿ ಅಣೆಕಟ್ಟಿನ ಉದ್ಯಾನವನದಲ್ಲಿ ಒಂದು ಸುಂದರವಾದ ಸಂಗೀತ ಕಾರಂಜಿಯನ್ನು ನಿರ್ಮಿಸಲಾಗುತ್ತಿದೆ. ಸಂಗೀತ ಕಾರಂಜಿಯ ಸಿವಿಲ್ ಕಾಮಗಾರಿಯ ಯೋಜನಾ ಅಂದಾಜು ವೆಚ್ಚ ರೂ.200.00 ಲಕ್ಷಗಳಾಗುತ್ತವೆ. ಕಂಪ್ಯೂಟರೈಜಡ್ ಸಂಗೀತ ಕಾರಂಜಿ (Computerized Musical Dancing Fountain) ಅಳವಡಿಕೆಗಾಗಿ ಟರ್ನ್ ಕೀ ಆಧಾರದ ಮೇಲೆ ಟೆಂಡರ್ ಕರೆದಿದ್ದು, ಅದರ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. ಟೆಂಡರ್ ಪ್ರಕ್ರಿಯೆಯು ಅಂತಿಮಗೊಳಿಸಿದ ನಂತರ ಸದರಿ ಕಾಮಗಾರಿಯ ನಿಖರವಾದ ಮೊತ್ತ ಲಭ್ಯವಾಗುವುದು.

ಬೃಹತ್ ಉದ್ಯಾನವನದ ಕಾಮಗಾರಿಗಳಿಗಾಗಿ 210 ಎಕರೆ ವಿಸ್ತಾರದ ಮಾಸ್ಟರ್ ಪ್ಲಾನ್ ರೂಪಿಸಿದ್ದು, ಇದರ ಅಂದಾಜು ಮೊತ್ತ ರೂ.30.00 ಕೋಟಿಯಾಗಿರುತ್ತದೆ. ಸದರಿ ಯೋಜನೆಗೆ ದಿನಾಂಕ 14-11-2000ರಂದು ನಡೆದ ಕೃಷ್ಣಾ ಭಾಗ್ಯ ಜಲ ನಿಗಮದ 38ನೇ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ.

(ಈ) ಬೃಹತ್ ಉದ್ಯಾನವನದ ಕಾಮಗಾರಿಯನ್ನು 2001ರಲ್ಲಿ ಪ್ರಾರಂಭಿಸಲಾಗಿದ್ದು, 2008-09ರಲ್ಲಿ ಪೂರ್ಣಗೊಳಿಸುವ ಕಾರ್ಯಕ್ರಮವಿದೆ. ಇದರಲ್ಲಿ ಶಿಲಾವನ (Rock Garden) ರಾಧಾ ಕೃಷ್ಣ ಉದ್ಯಾನವನ ಗಳನ್ನು 2004ರಲ್ಲಿ ಪೂರ್ಣಗೊಳಿಸಿ ಸಾರ್ವಜನಿಕರ ವೀಕ್ಷಣೆಗೆ ತೆರೆಯಲಾಗಿದೆ. ಮೊಗಲ್ ಗಾರ್ಡನ್, ಸ್ಪೇನ್ ಗಾರ್ಡನ್, ಇಟಲಿಯನ್ ಗಾರ್ಡನ್ ಹಾಗೂ ಫ್ರೆಂಚ್ ಗಾರ್ಡನ್ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಸದರಿ ಉದ್ಯಾನವನಗಳನ್ನು 2008-09ರಲ್ಲಿ ಸಾರ್ವಜನಿಕರ ವೀಕ್ಷಣೆಗೆ ತೆರೆಯಲು ಉದ್ದೇಶಿಸಲಾಗಿದೆ.

ಸಂಗೀತ ಕಾರಂಜಿಯ ಸಿವಿಲ್ ಕಾಮಗಾರಿಯು ಡಿಸೆಂಬರ್ 2004ರಲ್ಲಿ

ಪ್ರಾರಂಭಿಸಲಾಗಿದ್ದು, ಬಹುತೇಕ ಪೂರ್ಣಗೊಂಡಿದೆ. ಕಂಪ್ಯೂಟರೈಜಡ್ ಸಂಗೀತ ಕಾರಂಜಿ (Computerized Musical Dancing Fountain) ಅಳವಡಿಸುವ ಕಾಮಗಾರಿಗಾಗಿ ಟೆಂಡರ್ ಕರೆದಿದ್ದು, ಅದರ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ ಆಗಸ್ಟ್ 2008ರಲ್ಲಿ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕಾರ್ಯಕ್ರಮ ರೂಪಿಸಲಾಗಿದೆ.

ಮೇಲೆ ತಿಳಿಸಿದ ಉದ್ಯಾನವನಗಳನ್ನು ಕೃಷ್ಣಾ ಭಾಗ್ಯ ಜಲ ನಿಗಮ ವತಿಯಿಂದ ನಿರ್ಮಿಸುತ್ತಿದ್ದು, ಅರಣ್ಯ ಇಲಾಖೆಗೆ ಯಾವುದೇ ಹಣ ನೀಡಿರುವುದಿಲ್ಲ.

(ಊ) ಪ್ರಸಕ್ತ ಆಯವ್ಯಯದ ವರ್ಷದಲ್ಲಿ ಆಣೆಕಟ್ಟು ವಿಭಾಗದ ನಿರ್ವಹಿಸುತ್ತಿರುವ ಉದ್ಯಾನವನದ ಕಾಮಗಾರಿಗಳಿಗಾಗಿ ರೂ.418.89 ಲಕ್ಷಗಳು ಹಾಗೂ ಸಾಫ್ಟ್ ಲ್ಯಾಂಡ್‌ಸ್ಕೇಪ್ ಕಾಮಗಾರಿಗಳಿಗಾಗಿ ರೂ.200.00 ಲಕ್ಷಗಳು ಒಟ್ಟಾರೆ ಪ್ರಸಕ್ತ ಸಾಲಿನಲ್ಲಿ ರೂ.618.89 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ವಲಯದಲ್ಲಿ ಸರ್ಕಾರದ ಅರಣ್ಯ ಇಲಾಖೆಯಿಂದ ಎರವಲು ಸೇವೆಯ ಮೇಲೆ, ಸಧ್ಯಕ್ಕೆ ಈ ಕೆಳಕಂಡ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ.

1) ಶ್ರೀ ಬಿ.ವಿ. ಪಾಟೀಲ್, ಉಪ ಅರಣ್ಯ ಸಂರಕ್ಷಣಾಧಿಕಾರಿ

2) ಶ್ರೀ ಎಚ್.ಕೆ. ಜಗದೀಶ್, ಸಹಾಯಕ ಅರಣ್ಯ ಅಧಿಕಾರಿ

3) ಶ್ರೀ ಎಸ್.ಎಂ. ಖಿಣದಾಳೆ, ವಲಯ ಅರಣ್ಯ ಅಧಿಕಾರಿ

4) ಶ್ರೀ ಎಂ.ಎ. ಪಾಟೀಲ್, ವಲಯ ಅರಣ್ಯ ಅಧಿಕಾರಿ

ಋ) ಸದರಿ ಉದ್ಯಾನವನದ ಬಾಕಿ ಉಳಿದ ಕಾಮಗಾರಿಗಳನ್ನು 2008–09ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ ಮತ್ತು ಇದಕ್ಕೆ ಬೇಕಾದ ಹಣಕಾಸು ವ್ಯವಸ್ಥೆಯನ್ನು ನಿಗಮದಿಂದ ಮಾಡಲಾಗುವುದು.

ಅನುಬಂಧ

ಆಲಮಟ್ಟಿ ಅಣೆಕಟ್ಟು ವಲಯದಲ್ಲಿ ಎರವಲು ಸೇವೆಯಲ್ಲಿ ಕಾರ್ಯ ನಿರ್ವಹಿಸಿದ ಅರಣ್ಯ ವಿಭಾಗದ ಅಧಿಕಾರಿಗಳ ಹುದ್ದೆವಾರು ವಿವರಗಳು

ಕ್ರ. ಸಂ.	ಅಧಿಕಾರಿಯ ಹೆಸರು	ಹುದ್ದೆ	ಕಾರ್ಯನಿರ್ವಹಿಸಿದ ಅವಧಿ
1.	ಶ್ರೀ ಕೆ.ಡಿ. ಉದಮುಡಿ	ಉಪ ಅರಣ್ಯ ಸಂರಕ್ಷಣಾಧಿಕಾರಿಗಳು	30.11.96 – 22.11.2004
2.	ಶ್ರೀ ಬಿ.ವಿ. ಪಾಟೀಲ್	- ಸದರ -	22.11.2004 – ಇಲ್ಲಿಯವರೆಗೆ
3.	ಶ್ರೀ ಎಂ.ವಿ. ಪಾಟೀಲ್	ವಲಯ ಅರಣ್ಯಾಧಿಕಾರಿಗಳು	22.7.2000 – 28.4.2005 5.5.2006 – ಇಲ್ಲಿಯವರೆಗೆ
4.	ಶ್ರೀ ಎಸ್.ಕೆ. ಬಾಗಾಯತ	ವಲಯ ಅರಣ್ಯಾಧಿಕಾರಿಗಳು	26.9.2000 – 14.5.2006
5.	ಶ್ರೀ ಕೆ.ವಿ. ಮಲ್ಲಿಕಾರ್ಜುನ	ಸ. ಅರಣ್ಯ ಸಂರಕ್ಷಣಾಧಿಕಾರಿಗಳು	30.6.2003 – 16.6.2005
6.	ಶ್ರೀ ಹೆಚ್.ಕೆ. ಜಗದೀಶ್	- ಸದರ -	18.12.98 – 19.6.2003 1.6.2006 – ಇಲ್ಲಿಯವರೆಗೆ
7.	ಶ್ರೀ ಆರ್.ಕೆ. ರೇವಣಕರ್	- ಸದರ -	26.4.2005 – 31.5.2006
8.	ಶ್ರೀ ಎಸ್.ಎಂ. ಖಾಡಾಳೆ	ವಲಯ ಅರಣ್ಯ ಅಧಿಕಾರಿ	2.6.2005 – 19.5.2006
9.	ಶ್ರೀ ಬಿ.ಪಿ. ಚೌಹಾಣ್	ವಲಯ ಅರಣ್ಯ ಅಧಿಕಾರಿ	20.5.2006 – 15.12.2006